

بسم اللهِ الرّحمٰن الرّحيم

# ಕ್ಷಮಾದಾನ ಮತ್ತು ಶಿಕ್ಷೆ – ಇಸ್ಲಾಮಿನ ಉಪದೇಶಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **22–01–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

**وَجَزَاءُ سَيِّئَةٍ سَيِّئَةٌ مِثْلُهَا فَمَنْ عَفَا وَأَصْلَحَ فَأَجْرُهُ عَلَى اللَّهِ إِنَّهُ لَا يُحِبُّ الظَّالِمِينَ**

**ವ ಜಝಾಉ ಸಯ್ಯಿಅತಿನ್ ಸಯ್ಯಿಅತುನ್ ಮಿಸ್‌ಲುಹಾ, ಫಮನ್ ಅಫಾ ವ ಅಸ್‌ಲಹ ಫ ಅಜ್‌ರುಹೂ ಅಲಲ್ಲಾಹಿ ಇನ್ನಹೂ ಲಾ ಯುಹಿಬ್ಬುಝ್ಝಾಲಿಮೀನ್.**

ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ. ಆದರೆ ಯಾರಾದರೂ ಕ್ಷಮೆ ನೀಡಿದರೆ (ಮತ್ತು ಅದರ ಪರಿಣಾಮವಾಗಿ) ಒಳಿತುಂಟಾದರೆ ಅದರ ಫ್ರತಿಫಲ ಅವನಿಗೆ ಅಲ್ಲಾಹನಿಂದ ಲಭಿಸುವುದು. ದಿಟವಾಗಿಯೂ ಅವನು ದುಷ್ಕರ್ಮಿಗಳನ್ನು ಪ್ರೀತಿಸುವುದಿಲ್ಲ. (ಪವಿತ್ರ ಖುರ್‌ಆನ್ 42: 41)

ಇಸ್ಲಾಮೀ ತತ್ವಗಳ ಪ್ರಕಾರ ತಪ್ಪು ಕೆಲಸ ಮಾಡುವವನಿಗೆ, ಹಾನಿಯುಂಟು ಮಾಡುವವನಿಗೆ ಅವನು ಚಿಕ್ಕ ಮಟ್ಟದಲ್ಲಿ ಹಾನಿಯುಂಟು ಮಾಡುವವನಾಗಿದ್ದರೂ ದೊಡ್ಡ ಮಟ್ಟದಲ್ಲಿ ಹಾನಿಯನ್ನುಂಟು ಮಾಡುವವನಾಗಿದ್ದರೂ ಅಥವಾ ಅವನು ಶತ್ರುವಾಗಿದ್ದರೂ ಪ್ರತಿಯೊಬ್ಬನೊಂದಿಗೆ ಹೇಗೆ ವರ್ತಿಸಬೇಕೆಂದರೆ ಅದರ ಮೂಲಕ ಅವನಲ್ಲಿ ಸುಧಾರಣೆ ಉಂಟಾಗಬೇಕು. ಇಸ್ಲಾಮ್‌ನಲ್ಲಿ ಶಿಕ್ಷೆಯ ಕಲ್ಪನೆ ನಿಶ್ಚಯವಾಗಿಯೂ ಇದೆ. ಆದರೆ ಅದರೊಂದಿಗೆ ಕ್ಷಮೆ ನೀಡುವ ಬಗ್ಗೆ ಮತ್ತು ತಪ್ಪನ್ನು ಕಡೆಗಣಿಸುವ ಬಗ್ಗೆ ಸಹ ಆಜ್ಞೆ ಇದೆ. ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನದಲ್ಲಿ ಸಹ ಕೆಡುಕನ್ನು ಮಾಡುವವರಿಗೆ ಶಿಕ್ಷೆ ನೀಡಬೇಕೆಂಬ ಆಜ್ಞೆ ನೀಡಲಾಗಿದೆ. ಆದರೆ ಶಿಕ್ಷೆ ನೀಡುವುದರ ಹಿಂದೆ ಇರುವ ಉದ್ದೇಶ ಕೆಡುಕನ್ನು ಮಾಡುವವನ, ಹಾನಿ ಉಂಟುಮಾಡುವವನ ಮತ್ತು ಅಪರಾಧ ಮಾಡುವವನ ಸುಧಾರಣೆ ಆಗಿರಬೇಕು. ಸುಧಾರಣೆ ಮಾಡುವುದು ಉದ್ದೇಶವಾಗಿದ್ದರೆ ಶಿಕ್ಷೆ ನೀಡುವ ಮೊದಲು ಯೋಚಿಸಬೇಕು. ಶಿಕ್ಷೆ ನೀಡುವ ಮೂಲಕ ಈ ಉದ್ದೇಶ ಸಾಫಲ್ಯವಾಗುವುದೋ ಎಂದು ಯೋಚಿಸಿದ ನಂತರ, ಅಪರಾಧಿಯ ಸ್ಥಿತಿಯನ್ನು ನೋಡಿದ ನಂತರ ಈ ಅಪರಾದಿಯನ್ನು ಕ್ಷಮಿಸಿದರೆ ಅವನಲ್ಲಿ ಸುಧಾರಣೆ ಆಗಬಹುದು ಎಂದು ನಿಮಗೆ ತೋರುವುದಾದರೆ ನೀವು ಕ್ಷಮಿಸಿರಿ. ಅಥವಾ ಶಿಕ್ಷೆ ನೀಡುವುದರಿಂದ ಸುಧಾರಣೆ ಆಗಬಹುದೆಂದು ತೋರುವುದಾದರೆ ಶಿಕ್ಷೆ ನೀಡಿರಿ. ಹೀಗೆ ಕ್ಷಮಿಸುವುದಾದರೆ ಅದು ನಿಮ್ಮನ್ನು ಅತ್ಯುತ್ತಮ ಪ್ರತಿಫಲಕ್ಕೆ ವಾರೀಸುದಾರರನ್ನಾಗಿ ಮಾಡುವುದು ಎಂದು ಅಲ್ಲಾಹನು ಹೇಳುತ್ತಾನೆ. ಅಲ್ಲಾಹನು ಈ ವಚನದ ಕೊನೆಗೆ **ಇನ್ನಹೂ ಲಾ ಯುಹಿಬ್ಬುಝ್ಝಾಲಿಮೀನ್** ಎಂದು ಹೇಳಿ ಅಲ್ಲಾಹನು ಸ್ಪಷ್ಟಪಡಿಸಿರುವುದೇನೆಂದರೆ, ನೀವು ಶಿಕ್ಷೆ ನೀಡುವಾಗ ಸಹ ಮಿತಿಮೀರಿ ವರ್ತಿಸುವುದಾದರೆ ನೀವು ದುಷ್ಕರ್ಮಿಗಳಾಗಿ ಪರಿಗಣಿಸಲ್ಪಡುವಿರಿ ಎಂದು. ಪವಿತ್ರ ಖುರ್‌ಆನ್‌ನಲ್ಲಿ ಶಿಕ್ಷೆ ಮತ್ತು ಸುಧಾರಣೆ ಸಂಬಂಧಿಸಿ ಮೂಲಭೂತ ಸಿದ್ಧಾಂತವಾಗಿ ಇದನ್ನು ವಿವರಿಸಲಾಗಿದೆ. ಇದು ನಮ್ಮ ವೈಯಕ್ತಿಕ ಜೀವಿತದ ವ್ಯವಹಾರಗಳಲ್ಲೂ ಅವರಿಸಬೇಕಾದುದಾಗಿದೆ. ಸರಕಾರದ ವ್ಯವಹಾರಗಳಲ್ಲೂ ಮಾತ್ರವಲ್ಲ ಅಂತರಾಷ್ಟ್ರೀಯ ಮಟ್ಟದ ವ್ಯವಹಾರಗಳಲ್ಲೂ ಸಮಾಜದ ಸುಧಾರಣೆಗೋಸ್ಕರ ಸಹ ಇದು ಮೂಲಭೂತ ತತ್ವವಾಗಿದೆ. ಒಬ್ಬ ಅಪರಾಧಿಗೆ ಶಿಕ್ಷೆ ನೀಡುವುದರ ಮೂಲ ಉದ್ದೇಶ ಅವನ ಸುಧಾರಣೆಯನ್ನು ಮಾಡುವುದಾಗಿದೆ. ಅವನ ನೈತಿಕ ಗುಣಗಳನ್ನು ಉತ್ತಮ ಪಡಿಸುವುದಾಗಿದೆ.

ಇಸ್ಲಾಮ್ ಹೇಳುವುದೇನೆಂದರೆ ಕೇವಲ ಶಿಕ್ಷೆ ನೀಡುವ ಬಗ್ಗೆ ಒತ್ತು ನೀಡಬೇಡಿರಿ. ಸುಧಾರಣೆ ಬಗ್ಗೆ ಒತ್ತು ನೀಡಿರಿ. ಕ್ಷಮಿಸುವುದರಿಂದ ಸುಧಾರಣೆ ಆಗಬಹುದೆಂದು ನೀವು ಭಾವಿಸುವುದಾದರೆ ಕ್ಷಮಿಸಿರಿ. ಸ್ಥಿತಿಗತಿಗಳು ಶಿಕ್ಷೆ ನೀಡುವುದರಿಂದ ಸುಧಾರಣೆ ಆಗಬಹುದೆಂದು ಸೂಚಿಸುವುದಾದರೆ ಶಿಕ್ಷೆ ನೀಡಿರಿ. ಆದರೆ ಶಿಕ್ಷೆ ನೀಡುವಾಗ ವಿಶಿಷ್ಟವಾಗಿ ಗಮನಿಸಬೇಕಾದುದೇನೆಂದರೆ ಶಿಕ್ಷೆಯು ಅಪರಾಧಕ್ಕೆ ಅನುಸಾರವಾಗಿರಬೇಕು. ಅಪರಾಧಕ್ಕಿಂತ ಹೆಚ್ಚಿನ ಮಟ್ಟದ ಶಿಕ್ಷೆ ಕೊಡುವುದು ದೌರ್ಜನ್ಯ ಮತ್ತು ಅತಿರೇಕವಾಗುತ್ತದೆ. ಅಲ್ಲಾಹನು ದೌರ್ಜನ್ಯವನ್ನು ಮತ್ತು ಅತಿರೇಕ ವರ್ತನೆಯನ್ನು ಇಷ್ಟಪಡುವುದಿಲ್ಲ.

ಆದುದರಿಂದ ಇಸ್ಲಾಮ್ ಧರ್ಮದಲ್ಲಿ ಹಿಂದಿನ ಧರ್ಮಗಳ ಹಾಗೆ ಅತಿರೇಕವಿಲ್ಲ, ಅತಿಕಾಮ್ಯತೆಯೂ ಇಲ್ಲ. ಇಸ್ಲಾಮ್ ಧರ್ಮದ ಈ ಅತ್ಯುತ್ತಮ ಮಾದರಿಯನ್ನು ನಾವು ಹಝ್ರತ್ ಮುಹಮ್ಮದ್ﷺರ ಜೀವಿತದಲ್ಲಿ ಕಾಣುತ್ತೇವೆ. ಅಪರಾಧಿಯ ಸುಧಾರಣೆ ಆಗಬಹುದು ಎಂದು ತೋರಿದಾಗ ಅತ್ಯಂತ ದೌರ್ಜನ್ಯಗಾರ ಶತ್ರುವನ್ನು ಸಹ ಅವರು ಕ್ಷಮಿಸಿದರು. ಅವರ ವಿರುದ್ಧ, ಅವರ ಮಕ್ಕಳ ವಿರುದ್ಧ, ಅವರ ಶಿಷ್ಯರ ವಿರುದ್ಧ ಏನೇನೆಲ್ಲಾ ದೌರ್ಜನ್ಯಗಳು ನಡೆದುವು. ಆದರೆ ಶತ್ರು ಕ್ಷಮೆ ಯಾಚಿಸಿದಾಗ, ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಆಜ್ಞೆ ಪ್ರಕಾರ ಜೀವಿಸುವುದಾಗಿ ಪ್ರತಿಜ್ಞೆ ಮಾಡಿದಾಗ ಹಝ್ರತ್ ಮುಹಮ್ಮದ್ﷺರು ಶತ್ರು ಮಾಡಿದ ಅಪರಾಧಗಳನ್ನೆಲ್ಲಾ ಮರೆತು ಅವರನ್ನು ಕ್ಷಮಿಸಿದರು. ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ﷺರ ಪುತ್ರಿ ಹಝ್ರತ್ ಝೈನಬರವರು ಮಕ್ಕದಿಂದ ವಲಸೆ ಹೊರಟಾಗ ಹಬ್ಬಾರ್ ಬಿನ್ ಅಸ್‌ವದ್ ಎಂಬ ಒಬ್ಬ ದುಷ್ಕರ್ಮಿ ಈಟಿಯಿಂದ ಅವರನ್ನು ತಿವಿದನು. ಆ ಸಮಯದಲ್ಲಿ ಹಝ್ರತ್ ಝೈನಬ ಗರ್ಭಿಣಿಯಾಗಿದ್ದರು. ಈ ತಿವಿತದಿಂದ ಅವರಿಗೆ ಗಾಯವಾಯಿತಲ್ಲದೆ ನಂತರ ಗರ್ಭಪಾತವೂ ಸಂಭವಿಸಿತು. ಕೊನೆಗೆ ಈ ಗಾಯದ ಕಾರಣದಿಂದ ಅವರಿಗೆ ಜೀವಹಾನಿ ಸಹ ಸಂಭವಿಸಿತು. ಈ ಅಪರಾಧದ ಕಾರಣದಿಂದ ಅಪರಾಧಿಗೆ ಮರಣ ದಂಡನೆಯ ಶಿಕ್ಷೆ ವಿಧಿಸಲಾಗಿತ್ತು. ಆದರೆ ಹಝ್ರತ್ ಮುಹಮ್ಮದ್ﷺರ ಕ್ಷಮಾಗುಣ ಎಷ್ಟು ವಿಶಾಲವಾಗಿತ್ತೆಂದರೆ, ಅಪರಾಧಿ ತನ್ನನ್ನು ಕ್ಷಮಿಸಬೇಕೆಂದು ಬೇಡಿಕೊಂಡಾಗ ತನ್ನ ಪುತ್ರಿಯ ಹತ್ಯೆಗಾರನಾದ ಆ ಅಪರಾಧಿಗೆ ಸಹ ಕ್ಷಮೆ ನೀಡಿ ಹೇಳಿದರು: ಹಬ್ಬಾರ್ ನೀನು ಹೋಗು ಅಲ್ಲಾಹನು ನಿನಗೆ ಔದಾರ್ಯ ತೋರಿಸಿರುವನು. ಅವನು ನಿನಗೆ ಇಸ್ಲಾಮ್ ಸ್ವೀಕರಿಸುವ ಭಾಗ್ಯ ನೀಡಿದನು. ಸತ್ಯವಾದ ತೌಬ (ಕ್ಷಮೆಯಾಚನೆ) ಮಾಡುವ ಭಾಗ್ಯ ಸಹ ಅವನು ನಿನಗೆ ನೀಡಿದನು.

ಹದೀಸಿನಲ್ಲಿರುವ ಇನ್ನೊಂದು ವರದಿ ಹೀಗಿದೆ: ಕಅಬ್ ಬಿನ್ ಝುಹೈದ್ ಎಂಬ ಓರ್ವ ಕವಿ ಮುಸ್ಲಿಮ್ ಮಹಿಳೆಯರ ಬಗ್ಗೆ ಅಸಭ್ಯವಾದ ಪದ್ಯಗಳನ್ನು ರಚಿಸಿ ಹಾಡುತ್ತಿದ್ದನು. ಅವನು ಮಹಿಳೆಯರ ಚಾರಿತ್ರ್ಯವನ್ನು ನಿಂದಿಸಿ ಹೇಳುತ್ತಿದ್ದನು. ಆದುದರಿಂದ ಅವನಿಗೆ ಶಿಕ್ಷೆ ನೀಡಬೇಕೆಂಬ ತೀರ್ಪು ಆಗಿತ್ತು. ಮಕ್ಕ ವಿಜಯದ ನಂತರ ಕಅಬ್‌ನ ಸಹೋದರ ಅವನಿಗೆ ಬರೆದನು: ಮಕ್ಕವನ್ನು ಜಯಿಸಲಾಗಿದೆ. ನೀನು ಮುಹಮ್ಮದ್ﷺರಿಂದ ಕ್ಷಮೆ ಯಾಚಿಸುವುದು ಉತ್ತಮ. ಕಅಬ್ ಮದೀನಕ್ಕೆ ಆಗಮಿಸಿ ಕ್ಷಮೆಯನ್ನು ಯಾಚಿಸಿದಾಗ ಹಝ್ರತ್ ಮುಹಮ್ಮದ್ﷺರು ಅತ್ಯಂತ ದಯಾಮಯರಾಗಿ ಅವನನ್ನು ಕ್ಷಮಿಸಿದರು. ಆಗ ಅವನು ಒಂದು ಖಸೀದ ಗೀತೆಯನ್ನು ರಚಿಸಿ ಹಝ್ರತ್ ಮುಹಮ್ಮದ್ﷺರಿಗೆ

ಅರ್ಪಿಸಿದನು. ಹಝ್ರತ್ ಮುಹಮ್ಮದ್ﷺರು ತನ್ನ ಸುಂದರವಾದ ಒಂದು ಚಾದರವನ್ನು ಅವನಿಗೆ ಬಹುಮಾನವಾಗಿ ಕೊಟ್ಟರು.

ಈ ರೀತಿ, ಯಾವ ಶತ್ರುವಿಗೆ ಮರಣದಂಡನೆಯ ಶಿಕ್ಷೆಯ ತೀರ್ಪು ನೀಡಲಾಗಿತ್ತೋ ಅವನು ಹಝ್ರತ್ ಮುಹಮ್ಮದ್ﷺರ ದರಬಾರದಿಂದ ಕ್ಷಮೆ ಗಳಿಸಿದನಲ್ಲದೆ ಬಹುಮಾನವನ್ನು ಸಹ ಪಡೆದುಕೊಂಡು ಹೋದನು. ಇಂತಹ ಅನೇಕ ಘಟನೆಗಳು ಹಝ್ರತ್ ಮುಹಮ್ಮದ್ﷺರ ಜೀವಿತದಲ್ಲಿ ಕಾಣಲು ಸಿಗುತ್ತವೆ. ಹಝ್ರತ್ ಮುಹಮ್ಮದ್ﷺರು ಅಪರಾಧಿಗಳನ್ನು ಸುಧಾರಣೆ ಮಾಡಲಿಕ್ಕೋಸ್ಕರ ತನ್ನ ಸ್ವಂತ ಶತ್ರುಗಳನ್ನೂ ಕ್ಷಮಿಸಿದರು; ತನ್ನ ನಿಕಟ ಸಂಬಂಧಿಕರ ಶತ್ರುಗಳನ್ನೂ ಕ್ಷಮಿಸಿದರು; ಇಸ್ಲಾಮಿನ ಶತ್ರುಗಳನ್ನೂ ಕ್ಷಮಿಸಿದರು. ಆದರೆ ಸುಧಾರಣೆ ಮಾಡಲು ಶಿಕ್ಷೆ ನೀಡುವುದು ಆವಶ್ಯಕವಾದಾಗ ಅವರು ಶಿಕ್ಷೆ ಸಹ ನೀಡಿದ್ದರು. ಆದುದರಿಂದ ಈ ಮಹತ್ವ ಪೂರ್ಣ ಆಜ್ಞೆಯ ಮುಖ್ಯ ಉದ್ದೇಶ ನೀವು ಸುಧಾರಣೆ ಮಾಡಬೇಕಾಗಿದೆ, ನೀವು ಪ್ರತೀಕಾರ ಮಾಡಬಾರದು ಎಂಬುದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಾನು ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನವನ್ನು ತನ್ನ ಗ್ರಂಥಗಳಲ್ಲೂ ತನ್ನ ನುಡಿಗಳಲ್ಲೂ ಅನೇಕ ಸ್ಥಳಗಳಲ್ಲಿ ವಿವರಿಸಿದ್ದಾರೆ. ಅಂದಾಜು ಹದಿಮೂರು ಗ್ರಂಥಗಳಲ್ಲಿ ಈ ವಚನದ ವ್ಯಾಖ್ಯಾನವಿದೆ. ಪ್ರಾಯಶಃ ಅದಕ್ಕಿಂತ ಹೆಚ್ಚು ಗ್ರಂಥಗಳಲ್ಲೂ ಬರೆದಿರಬಹುದು. ಇಪ್ಪತ್ತೊಂದು ಇಪ್ಪತ್ತೆರಡು ಸ್ಥಳಗಳಲ್ಲಿ ಈ ವಚನದ ಬಗ್ಗೆ ವಿವರಿಸಿದ್ದಾರೆ. ಅವರು ತನ್ನ ಸಂಗಡಿಗರೊಂದಿಗೆ ಮಾತನಾಡುತ್ತಿದ್ದಾಗ ಸಹ ಈ ವಚನದ ವ್ಯಾಖ್ಯಾನ ನೀಡಿರುವರು. **ಇಸ್ಲಾಮೀ ಉಸೂಲ್‌ಕೀ ಫಿಲಾಸಫಿ** (ಇಸ್ಲಾಮ್ ಧರ್ಮ ತತ್ವಜ್ಞಾನ) ಎಂಬ ಗ್ರಂಥದಲ್ಲಿ ಅವರು ಶಿಕ್ಷೆ ಮತ್ತು ಕ್ಷಮೆಯ ತತ್ವಜ್ಞಾನ ಮತ್ತು ಅದರ ಆತ್ಮವನ್ನು ವಿವರಿಸುತ್ತಾ ಹೀಗೆ ಹೇಳಿದರು: ಕೆಡುಕಿಗೆ ಶಿಕ್ಷೆ ಕೆಡಿಕಿಗೆ ಅನುಸಾರವಾಗಿದೆ. (ಪವಿತ್ರ ಖುರ್‌ಆನಿನ ವಚನ ಪ್ರಕಾರ) ಕ್ಷಮೆ ನೀಡುವುದರಿಂದ ಸುಧಾರಣೆ ಆಗುವುದಾದರೆ ಹಾಗೂ ಅದರಿಂದ ಕೆಡುಕು ಉಂಟಾಗುವುದಿಲ್ಲ ಎಂದಾದರೆ ಅಂತಹ ಸಂದರ್ಭದಲ್ಲಿ ಕ್ಷಮೆ ನೀಡಬೇಕು. ಹಾಗೆ ಮಾಡಿದಲ್ಲಿ ಕ್ಷಮೆ ನೀಡಿದವನಿಗೆ ಅದರ ಪ್ರತಿಫಲ ಲಭಿಸುವುದು. (ಎಂದರೆ ಕ್ಷಮಿಸುವವನು ಅಲ್ಲಾಹನಿಂದ ಪ್ರತಿಫಲ ಪಡೆಯುವನು.) ಪವಿತ್ರ ಖುರ್‌ಆನಿನ ವಚನ, ಅನಾವಶ್ಯಕವಾಗಿ ಮತ್ತು ಎಲ್ಲ ಸ್ಥಳಗಳಲ್ಲೂ ಕೆಡುಕನ್ನು ಎದುರಿಸಬಾರದು ಎಂದು ಹೇಳುವುದಿಲ್ಲ. (ಎಂದರೆ ಕೆಲವು ಸಂದರ್ಭಗಳಲ್ಲಿ ಕೆಡುಕನ್ನು ಎದುರಿಸಬೇಕು). ಅಪರಾಧಿಗಳಿಗೂ ದೌರ್ಜನ್ಯಗಾರರಿಗೂ ಶಿಕ್ಷೆ ನೀಡಲೇಬಾರದೆಂದು ಸಹ ಪವಿತ್ರ ಖುರ್‌ಆನ್ ಹೇಳುವುದಿಲ್ಲ. ಬದಲಾಗಿ ಇಸ್ಲಾಮ್ ಉಪದೇಶಿಸುವುದೇನೆಂದರೆ ಇದು ಅಪರಾಧವನ್ನು ಕ್ಷಮಿಸುವ ಸಂದರ್ಭವೋ, ಶಿಕ್ಷೆ ನೀಡುವ ಸಂದರ್ಭವೋ ಎಂದು ನೋಡಬೇಕು. ಆದುದರಿಂದ ಅಪರಾಧಿಗೆ ಪ್ರಯೋಜನಕರವಾದ ರೀತಿಯಲ್ಲಿ ಮತ್ತು ಜನಸಾಮಾನ್ಯರಿಗೆ ಪ್ರಯೋಜನಕರವಾದ ರೀತಿಯಲ್ಲಿ ಯಾವುದು ವಾಸ್ತವಿಕವಾಗಿ ಉತ್ತಮವಾಗಿದೆಯೋ ಅದನ್ನು ಅವಲಂಬಿಸಬೇಕು.

ಇಂದಿನ ಕಾಲದಲ್ಲಿ ಮಾನವರ ಹಕ್ಕುಗಳನ್ನು ರಕ್ಷಿಸುವವರಾಗಿ ಅಲೆದಾಡುವವರು ಏಕಪಕ್ಷೀಯರಾಗಿ ವರ್ತಿಸುತ್ತಾರೆ. ಎಷ್ಟು ದೊಡ್ಡ ಅಪರಾಧ ಮಾಡಿದ್ದರೂ ಅಂತಹ ವ್ಯಕ್ತಿಗಳಿಗೆ ಮಾನವೀಯ ಸಹಾನುಭೂತಿಯ ಹೆಸರಲ್ಲಿ ಎಷ್ಟು ಉತ್ತೇಜನ ನೀಡಲಾಗುತ್ತಿದೆ ಎಂದರೆ ಅನೇಕ ಅಪರಾಧಿಗಳು ಹೇಗೆ ಆಗಿದ್ದಾರೆಂದರೆ ಅವರಿಗೆ ತಾವು ಮಾಡಿದ ಅಪರಾಧಗಳ ಪ್ರಜ್ಞೆಯೇ ಅಳಿದು ಹೋಗಿರುತ್ತದೆ. ಹಂತಕರು, ಉದ್ಯೋಗಿ ಹಂತಕರು ಎಷ್ಟು ಅಹಂಭಾವದಿಂದ ವರ್ತಿಸುತ್ತಾರೆಂದರೆ ಅವರಿಗೆ ತಮ್ಮ ಜೀವದ ಹೊರತು ಅನ್ಯರ ಜೀವದ ಬಗ್ಗೆ ಯಾವುದೇ ಮಹತ್ವ ಕಾಣಿಸುವುದಿಲ್ಲ. ಇಂತಹ ಜನರಿಗೆ ಮರಣದಂಡನೆಯ ಶಿಕ್ಷೆಯನ್ನೇ ನೀಡಬೇಕು. ಕೊಲೆಯಾದವನ ವಾರೀಸುದಾರರು ಕ್ಷಮೆ ನೀಡಿದ ಸಂದರ್ಭದಲ್ಲಿ ಹೊರತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಅಪರಾಧಿಗೆ ಯಾವುದು ಹಿತಕರ ಎಂದು ಮಾತ್ರ ನೋಡಿದರೆ ಸಾಕಾಗಲಾರದು. ಕೆಲವು ಸಂದರ್ಭಗಳಲ್ಲಿ ಕೇವಲ ಅಪರಾಧಿಗೆ ಯಾವುದು ಹಿತಕರ ಎಂದು ಮಾತ್ರ ನೋಡದೆ ಸಮಾಜಕ್ಕೆ ಯಾವುದು ಹಿತಕರ ಎಂದು ಸಹ ನೋಡಬೇಕು. ಚಿಕ್ಕದನ್ನು ದೊಡ್ಡಕ್ಕೋಸ್ಕರ ಬಲಿಯರ್ಪಿಸುವುದು ಸಮಾಜದ ವಿಶಾಲವಾದ ಹಿತವನ್ನು ಪರಿಗಣಿಸಿ ಕೆಲವು ಸಾರಿ ಆವಶ್ಯಕವಾಗುತ್ತದೆ. ಆದುದರಿಂದ ಯಾವುದಾದರೂ ಶಿಕ್ಷೆಯ ತೀರ್ಪು ನೀಡುವಾಗ ಅದು ಸಮಾಜದ ಮೇಲೆ ಸಾಮೂಹಿಕವಾಗಿ ಹೇಗೆ ಪ್ರಭಾವ ಬೀರುತ್ತದೆ ಎಂದು ನೋಡಬೇಕು. ಕೆಲವು ಸಾರಿ ಕ್ಷಮೆ ನೀಡುವುದರ ಮೂಲಕ ಸಮಾಜದ ಮೇಲೆ ತಪ್ಪು ಪ್ರಭಾವ ಬೀರುತ್ತದೆ. "ಇಷ್ಟು ದೊಡ್ಡ ಅಪರಾಧಿ ದೊಡ್ಡ ಅಪರಾಧ ಮಾಡಿದ್ದರೂ ರಕ್ಷಿಸಲ್ಪಟ್ಟನು" ಎಂದು ಹೇಳಿ ಉದ್ಧಟರಾದ ಜನರು "ನಾವು ಸಹ ಅಪರಾಧ ಮಾಡಿದ ನಂತರ ಕ್ಷಮೆ ಯಾಚಿಸಿ ರಕ್ಷಿಸಲ್ಪಡುವೆವು" ಎಂದು ಯೋಚಿಸುವರು. ಈ ಪರಿಸ್ಥಿತಿ ಅಪರಾಧಿಗಳಿಗೆ ತಮ್ಮ ಕೆಟ್ಟ ಕೆಲಸ ಮಾಡಲು ಧೈರ್ಯ ನೀಡುತ್ತದೆ. ಮತ್ತು ಅವರಿಗೆ ಶಕ್ತಿ ಒದಗಿಸುತ್ತದೆ. ಕ್ಷಮಿಸುವುದು ಅಪರಾಧಿಗಳಿಗೆ ಧೈರ್ಯ ನೀಡುವುದಾದರೆ ಆಗ ಶಿಕ್ಷೆ ನೀಡುವ ಆವಶ್ಯಕತೆ ಉಂಟಾಗುತ್ತದೆ. ಆಗ ಕ್ಷಮಿಸುವ ಆವಶ್ಯಕತೆ ಇರುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಸ್ಲಾಮಿನ ಸುಂದರ ತತ್ವಗಳನ್ನು ತೌರಾತ್ ಮತ್ತು ಇಂಜೀಲಿನ ತತ್ವಗಳ ಎದುರಿಗೆ ಪ್ರಸ್ತಾಪಿಸುತ್ತಾ ಹೇಳಿದರು: ಇಂಜೀಲಿನಲ್ಲಿ ಹೇಳಲಾಗಿದೆ: ನೀನು ಕೆಡುಕನ್ನು ಎದುರಿಸಲೇಬೇಡ ಎಂದು. ಇಂಜೀಲಿನ ಈ ಉಪದೇಶ ಅನುಪಯೋಗಿ ಆಗಿದೆ. ವಿಶಿಷ್ಟ ಸಂದರ್ಭದಲ್ಲಿ ಹೊರತು ಈ ಉಪದೇಶವನ್ನು ಪಾಲಿಸುವುದು ಅಸಾಧ್ಯವೇ ಆಗಿದೆ. ಇನ್ನೊಂದು ಕಡೆ ತೌರಾತನ್ನು ನೋಡಿರಿ, ಅದು ಅತಿರೇಕದ ಕಡೆಗೆ ಬಾಗಿದೆ. ಅದರಲ್ಲಿ ಕೇವಲ ಒಂದೇ ಪಾರ್ಶ್ವದ ಬಗ್ಗೆ ಒತ್ತು ನೀಡಿದೆ. ಜೀವಕ್ಕೆ ಬದಲಾಗಿ ಜೀವ, ಕಣ್ಣಿಗೆ ಬದಲಾಗಿ ಕಣ್ಣು ಕಿವಿಗೆ ಬದಲಾಗಿ ಕಿವಿ ಹಲ್ಲಿಗೆ ಬದಲಾಗಿ ಹಲ್ಲು ಮುರಿಯುವ ಬಗ್ಗೆ ಒತ್ತಿ ಹೇಳಲಾಗಿದೆ. ತೌರಾತಿನ ಈ ಉಪದೇಶದಲ್ಲಿ ಕ್ಷಮೆಯ ಮತ್ತು ಔದಾರ್ಯದ ಹೆಸರೇ ಇರುವುದಿಲ್ಲ. ಆದರೆ ಪವಿತ್ರ ಖುರ್‌ಆನ್ ಎಷ್ಟು ಉತ್ತಮವಾದ ಮಾರ್ಗದರ್ಶನ ನೀಡಿದೆ. ಅದು ಮನುಷ್ಯ ಪ್ರಕೃತಿಗೆ ಅನುಯೋಜ್ಯವಾಗಿದೆ. ಉದಾಹರಣೆಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: وَجَزَاءُ سَيِّئَةٍ سَيِّئَةٌ مِثْلُهَا فَمَنْ عَفَا وَأَصْلَحَ فَأَجْرُهُ عَلَى اللَّهِ **ವ ಜಝಾಉ ಸಯ್ಯಿಅತಿನ್ ಸಯ್ಯಿಅತುನ್ ಮಿಸ್‌ಲುಹಾ ಫ ಮನ್ ಅಫಾ ವ ಅಸ್‌ಲಹ ಫ ಅಜ್‌ರುಹೂ ಅಲಲ್ಲಾಹಿ** ಎಷ್ಟು ಕೆಡುಕು ಮಾಡಲಾಗಿದೆಯೋ ಅಷ್ಟೇ ಕೆಡುಕನ್ನು ಮಾಡುವುದು ಅನುಮತಿಸಲಾಗಿದೆ. ಎಂದರೆ ಅಷ್ಟು ಮಾತ್ರ ಶಿಕ್ಷೆ ನೀಡಬಹುದಾಗಿದೆ. ಆದರೆ ಕ್ಷಮಿಸುವುದಾದರೆ ಮತ್ತು ಕ್ಷಮಿಸುವ ಉದ್ದೇಶ ಸುಧಾರಣೆ ಮಾಡುವುದು ಆಗಿದ್ದರೆ, ಸಂದರ್ಭಕ್ಕೆ ಅನುಸಾರವಾಗಿ ಕ್ಷಮಿಸಿದ್ದರೆ, ಅದಕ್ಕೆ ಅಲ್ಲಾಹನು ಕ್ಷಮಿಸುವವನಿಗೆ ಪ್ರತಿಫಲ ನೀಡುವನು.

ಲೋಕದ ಸಮಸ್ಯೆಗಳ ಪರಿಹಾರ ಇಸ್ಲಾಮ್ ಧರ್ಮ ತತ್ವಗಳಲ್ಲಿ ಪ್ರತಿಯೊಂದು ಕಾಲಘಟ್ಟದಲ್ಲಿಯೂ ಲಭ್ಯವಾಗಿದೆ. ಅದು ಶಿಕ್ಷೆಯ ಬಗ್ಗೆಯಾಗಿರಲಿ ಅಥವಾ ಬೇರೆ ಸಮಸ್ಯೆಗಳ ಬಗ್ಗೆಯಾಗಿರಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಂದು ವಿಭಾಗದ ಜನರಿಗೆ ಕ್ಷಮಿಸುವುದು ಎಂದರೇನೆಂದೇ ತಿಳಿದಿಲ್ಲ. ಅವರು ತಮ್ಮ ತಂದೆ ತಾತಂದಿರ ಕಾಲದ ದ್ವೇಷವನ್ನು ನೆನಪಿಟ್ಟುಕೊಂಡಿರುತ್ತಾರೆ. ಇನ್ನೊಂದು ಕಡೆ ಅಭಿಮಾನ ರಹಿತರಾದ ನಿರ್ಲಜ್ಜ ಜನರಿದ್ದಾರೆ. ಅವರು ನೈತಿಕತೆಗೆ ಕಳಂಕವಾಗಿದ್ದಾರೆ. ಅವರು ಕ್ಷಮೆಯ ಹೆಸರಲ್ಲಿ ಅಭಿಮಾನ ರಹಿತರಾಗಿದ್ದಾರೆ. ಆದುದರಿಂದ ಅಭಿಮಾನ ರಾಹಿತ್ಯವೂ

ಇರಬಾರದು. ದೌರ್ಜನ್ಯವೂ ಇರಬಾರದು. ಒಬ್ಬನು ಇನ್ನೊಬ್ಬನ ಸಹೋದರಿ ಅಥವಾ ಮಗಳ ಗೌರವವನ್ನು ಆಕ್ರಮಿಸುವುದಾದರೆ ಅವರ ಚಾರಿತ್ರ್ಯದ ಮೇಲೆ ಆಕ್ರಮಣ ಮಾಡುವುದಾದರೆ ಅಂತಹ ವ್ಯಕ್ತಿಯ ವಿರುದ್ಧ ನಿಯಮಗಳನ್ನು ಬಳಸಿ ಕ್ರಮ ಜರಗಿಸಬೇಕು. ಅಂತಹ ಸಂದರ್ಭದಲ್ಲಿ ಕ್ಷಮಿಸುವ ಪ್ರಶ್ನೆಯೇ ಇರುವುದಿಲ್ಲ. ಆದುದರಿಂದ ಕ್ಷಮೆ ಮತ್ತು ಅಭಿಮಾನ ರಾಹಿತ್ಯದ ವ್ಯತ್ಯಾಸ ತಿಳಿದುಕೊಳ್ಳಬೇಕು. ಆದರೆ ನಿಯಮವನ್ನು ಕೈಗೆತ್ತಿಕೊಳ್ಳಬಾರದು. ಇದು ಪಾಲಿಸಬೇಕಾದ ಶರತ್ತಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವಿಧ ಸ್ಥಳಗಳಲ್ಲಿ ಇದರ ಬಗ್ಗೆ ವಿವರಿಸಿದ್ದಾರೆ. ನಾನು ಇನ್ನಷ್ಟು ಹೆಚ್ಚು ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸುವೆನು. ಬಾಹ್ಯವಾಗಿ ನೋಡಿದರೆ ಒಂದೇ ವಿಷಯ ಚರ್ಚಿಸಲಾಗಿದೆ ಎಂದು ಕಾಣುತ್ತದೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವಿಧ ಸಂದರ್ಭಗಳಲ್ಲಿ ವಿವಿಧ ರೀತಿಗಳಲ್ಲಿ ವಿವಿಧ ಉಪದೇಶಗಳನ್ನು ನೀಡಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಕೆಡುಕಿಗೆ ಪ್ರತಿಫಲ ಅಷ್ಟೇ ಪ್ರಮಾಣದ ಕೆಡುಕು ಆಗಿದೆ. ಆದರೆ ಒಬ್ಬನು ಕ್ಷಮಿಸಿದರೆ ಆ ಕ್ಷಮಿಸುವಿಕೆಯಿಂದ ಏನಾದರೂ ಸುಧಾರಣೆ ಉಂಟಾಗುವುದಾದರೆ, ಹಾಗೂ ಆ ಕಾರಣದಿಂದ ಯಾವುದೇ ಕೆಡುಕು ಸಂಭವಿಸದಿದ್ದರೆ ಅಲ್ಲಾಹನು ಕ್ಷಮಿಸುವವನಿಂದ ಸಂಪ್ರೀತನಾಗುವನು. ಅವನಿಗೆ ಪ್ರತಿಫಲವನ್ನು ಕೊಡುವನು. ಪವಿತ್ರ ಖುರ್‌ಆನ್ ಪ್ರಕಾರ ಪ್ರತಿಯೊಂದು ಸಂದರ್ಭದಲ್ಲಿ ಪ್ರತೀಕಾರ ಮಾಡುವುದು ಸ್ತುತ್ಯರ್ಹವಲ್ಲ. ಅದೇ ರೀತಿಯಲ್ಲಿ ಪ್ರತಿಯೊಂದು ಸಂದರ್ಭದಲ್ಲಿ ಕ್ಷಮಿಸುವುದು ಸಹ ಸ್ತುತ್ಯರ್ಹವಲ್ಲ. ಯಾವಾಗಲೂ ಸಂದರ್ಭವನ್ನು ನೋಡಿಕೊಂಡು ಕ್ಷಮಿಸಬೇಕು ಅಥವಾ ಶಿಕ್ಷೆ ನೀಡಬೇಕು. ಪವಿತ್ರ ಖುರ್‌ಆನಿನ ಉಪದೇಶ ಇದೇ ಆಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾರ ಸಂಕಲ್ಪ ಉತ್ತಮವಾಗಿದೆಯೋ ಮತ್ತು ಅವನ ಕೆಲಸದ ಉದ್ದೇಶ ಸುಧಾರಣೆ ಮಾಡುವುದಾಗಿದೆಯೋ ಅಂತಹ ಮನುಷ್ಯನಿಂದ ಅಲ್ಲಾಹನು ಸಂಪ್ರೀತನಾಗುತ್ತಾನೆ. ಅಭಿಮಾನ ರಹಿತ ನಿರ್ಲಜ್ಜನಾದ ವ್ಯಕ್ತಿ ಕ್ಷಮಿಸುವುದರಿಂದ ಅಲ್ಲಾಹನು ಸಂಪ್ರೀತನಾಗುವುದಿಲ್ಲ. ಯಾರು ಪ್ರತೀಕಾರದ ಮನೋಭಾವ ಹೊಂದಿರುತ್ತಾನೋ ಅವನ ಬಗ್ಗೆಯೂ ಅಲ್ಲಾಹನು ಸಂಪ್ರೀತನಾಗುವುದಿಲ್ಲ. ಎರಡು ವಿಷಯಗಳ ಬಗ್ಗೆ ಗಮನಿಸಬೇಕು. ಅಭಿಮಾನ ರಹಿತನಾಗುವಷ್ಟು ಮೃದುವಾಗಬಾರದು. ಅಂತಹವನ ಬಗ್ಗೆ ಅಲ್ಲಾಹನು ಸಂಪ್ರೀತನಾಗಲಾರನು. ಪ್ರತೀಕಾರ ಮನೋಭಾವದಿಂದ ಸಹ ವರ್ತಿಸಬಾರದು. ಅದು ಸಹ ಅಲ್ಲಾಹನು ಕೋಪಗೊಳ್ಳುವಂತೆ ಮಾಡುತ್ತದೆ. ಈ ಎರಡು ವಿಷಯಗಳನ್ನು ಗಮನದಲ್ಲಿರಿಸಿ ಶಿಕ್ಷೆ ಮತ್ತು ಕ್ಷಮೆಯ ತೀರ್ಮಾನ ಮಾಡಬೇಕು.

ನಮ್ಮ ಜಮಾಅತಿನ ಹುದ್ದೇದಾರರು ಮತ್ತು ಜಮಾಅತಿನ ನಿಝಾಮ್ ಈ ವಿಷಯದ ಬಗ್ಗೆ ಹೆಚ್ಚಿನ ಗಮನ ನೀಡಬೇಕು. ಸಾಮಾನ್ಯವಾಗಿ ಇದರ ಬಗ್ಗೆ ಗಮನ ನೀಡಲಾಗುತ್ತದೆ. ಆದರೆ ಕೆಲವರ ಬಗ್ಗೆ ನೀಡಲಾಗುವ ತೀರ್ಪುಗಳು ಮತ್ತು ಶಿಫಾರಸುಗಳು ನನಗೆ ಬರುತ್ತಿವೆ. ಅವುಗಳಲ್ಲಿ ಪ್ರತೀಕಾರ ಮನೋಭಾವ ಇರುತ್ತದೆ ಎಂದು ನಾನು ಹೇಳುವುದಿಲ್ಲ. ಆದರೆ ಕೆಲವು ಸಾರಿ ಶಿಫಾರಸು ಮಾಡುವವರ ಸಹಜ ಒಲವು ಕಠಿಣವಾಗಿ ಶಿಕ್ಷಿಸುವ ಬಗ್ಗೆಯಾಗಿರುತ್ತದೆ. ಮತ್ತು ಬೇರೆ ಕೆಲವು ಶಿಫಾರಸುಗಳು ಆವಶ್ಯಕತೆಗಿಂತ ಹೆಚ್ಚು ಮೃದುವಾಗಿದ್ದು ಕ್ಷಮಿಸಬೇಕೆಂಬ ಒಲವು ಹೊಂದಿರುತ್ತದೆ. ಇವುಗಳಿಂದ ಕೆಡುಕುಗಳು ತಲೆ ದೋರುತ್ತವೆ. ಆದುದರಿಂದ ಶಿಕ್ಷೆ ನೀಡುವುದು ಇಷ್ಟಕರವೇನೂ ಅಲ್ಲ. ಮತ್ತು ಕ್ಷಮಿಸುವುದು ಸ್ತುತ್ಯರ್ಹವೂ ಆಗಿರುವುದಿಲ್ಲ. ಮುಖ್ಯ ವಸ್ತು ಅಲ್ಲಾಹನ ಸಂಪ್ರೀತಿ ಗಳಿಸುವುದಾಗಿದೆ. ಸುಧಾರಣೆಯ ಉದ್ದೇಶದಿಂದ ವರ್ತಿಸಿದರೆ ಮಾತ್ರ ಅಲ್ಲಾಹನ ಸಂಪ್ರೀತಿ ಲಭಿಸುತ್ತದೆ. ಆದುದರಿಂದ ಜಮಾಅತಿನ ನಿಝಾಮಿನ ವಿವಿಧ ವಿಭಾಗಗಳು ಉಮೂರೆ ಆಮ್ಮ, ಖಝಾ ಮೊದಲಾದವು ಬಹಳ ಗಾಢವಾಗಿ ಚಿಂತಿಸಿ ಶಿಫಾರಸು ಮಾಡಬೇಕು ಮತ್ತು ತೀರ್ಪು ನೀಡಬೇಕು. ಆ ಮೂಲಕ ನಾವು ನಮ್ಮ ಜಮಾಅತಿನಲ್ಲಿ ವಾಸ್ತವಿಕ ನಿಝಾಮ್ ಮತ್ತು ಸ್ಥಿತಿ ಸೃಷ್ಟಿಸಲು ಸಾಧ್ಯವಾಗಬೇಕು. ಅದು ಅಲ್ಲಾಹನ ಸಂಪ್ರೀತಿ ಗಳಿಸುವಂತಹದಾಗಬೇಕು. ಅದಕ್ಕೋಸ್ಕರ ಅಲ್ಲಾಹನಲ್ಲಿ ಪ್ರಾರ್ಥಿಸಿ ಸಹಾಯ ಬೇಡುತ್ತಾ ಇರಬೇಕು. ಯಾವುದಾದರೂ ತೀರ್ಪು ನೀಡುವಾಗ ಅಲ್ಲಾಹನೊಂದಿಗೆ ಪ್ರಾರ್ಥಿಸಿ ತೀರ್ಪು ನೀಡಿರಿ. ಅನಂತರ ಆಯಾಕಾಲದ ಖಲೀಫರಿಗೆ ಶಿಫಾರಸು ಮಾಡಬೇಕು. ಹೀಗೆ ಮಾಡಿದರೆ ಯಾರ ವಿರುದ್ಧ ದೂರು ನೀಡಲಾಗಿದೆಯೋ ಆ ವ್ಯಕ್ತಿ ಸಹ ಪ್ರತಿಯೊಂದು ರೀತಿಯ ಕೆಟ್ಟ ಪರಿಣಾಮಗಳಿಂದ ರಕ್ಷಿಸಲ್ಪಡುವನು. ಮತ್ತು ಜಮಾಅತಿನ ನಿಝಾಮ್ ಸಹ ಸುರಕ್ಷಿತವಾಗಿರುವುದು. ಜಮಾಅತಿನ ಯಾವುದೇ ತೀರ್ಮಾನ ಆತಂಕಕ್ಕೆ ಕಾರಣವಾಗಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಸೀಮ್ ದಅ್‌ವತ್ ಎಂಬ ತನ್ನ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ: ಇಸ್ಲಾಮಿನ ವಿರುದ್ಧ ಆಕ್ಷೇಪ ಮಾಡುವವರಿಗೆ ಮತ್ತು ಮುಸ್ಲಿಮೇತರರಿಗೆ ಇಸ್ಲಾಮಿನ ಸುಂದರ ತತ್ವಗಳ ಬಗ್ಗೆ ತಿಳಿದಿರಬೇಕಾದುದು ಆವಶ್ಯಕವಾಗಿದೆ. ಇಸ್ಲಾಮಿನಲ್ಲಿ ಎಂತಹ ಸುಂದರ ತತ್ವಗಳಿವೆ ಎಂದರೆ ಬೇರೆ ಯಾವ ಧರ್ಮದಲ್ಲಿಯೂ ಅವು ಇಲ್ಲ. ನಿಮಗೆ ಯಾರಾದರೂ ಕಷ್ಟ ನೀಡಿದರೆ, ಎಂದರೆ ನಿಮ್ಮ ಹಲ್ಲು ಮುರಿದರೆ ಅಥವಾ ಕಣ್ಣನ್ನು ಒಡೆದು ಹಾಕಿದರೆ ಅದಕ್ಕಿರುವ ಶಿಕ್ಷೆ ಅಷ್ಟೇ ಪ್ರಮಾಣದ ಕೆಡುಕು ಮಾಡುವುದಾಗಿದೆ. ಆದರೆ ನೀವು ಇಂತಹ ಪರಿಸ್ಥಿತಿಯಲ್ಲಿ ಕ್ಷಮಿಸಿದರೆ ಮತ್ತು ಅದರಿಂದ ಉತ್ತಮ ಪರಿಣಾಮ ಆಗುವುದಾದರೆ ಅದರಿಂದ ಸುಧಾರಣೆ ಆಗುವುದಾದರೆ ಎಂದರೆ ಅಪರಾಧಿ ತನ್ನ ಸ್ವಭಾವವನ್ನು ಸುಧಾರಣೆ ಮಾಡುವುದಾದರೆ ಅಂತಹ ಸ್ಥಿತಿಯಲ್ಲಿ ಕ್ಷಮಿಸಿದವನಿಗೆ ಅಲ್ಲಾಹನಿಂದ ಪ್ರತಿಫಲ ಸಿಗುವುದು.

ಪ್ರಕೃತಿ ನಿಯಮಗಳ ಹಾಗೆ ನಮ್ಮ ಆಹಾರ ಸಹ ಬದಲಾಗುತ್ತಾ ಇರುತ್ತದೆ. ಅಲ್ಲಾಹನು ಸಹ ಹವಾಗುಣಕ್ಕೆ ಅನುಸಾರವಾಗಿ ಆಹಾರ ಪದಾರ್ಥಗಳನ್ನು ಸೃಷ್ಟಿಸುತ್ತಾ ಇರುತ್ತಾನೆ. ಇದೇ ರೀತಿ ಚಳಿಗಾಲದಲ್ಲಿ ಮತ್ತು ಬೇಸಗೆ ಕಾಲದಲ್ಲಿ ಬಟ್ಟೆಗಳ ರೀತಿ ಸಹ ಬೇರೆ ಬೇರೆ ಇರುತ್ತವೆ. ಇವುಗಳೆಲ್ಲಾ ಪ್ರಕೃತಿ ನಿಯಮಗಳ ಪ್ರಕಾರವಾಗಿವೆ. ಇದೇ ರೀತಿ ನಮ್ಮ ಸ್ವಭಾವ ಗುಣಗಳು ಸಹ ಸಂದರ್ಭಕ್ಕೆ ಅನುಸಾರವಾಗಿ ಬದಲಾವಣೆಯನ್ನು ಬಯಸುತ್ತದೆ. ಕೆಲವು ಸಂದರ್ಭದಲ್ಲಿ ಅನ್ಯರು ಭಯಪಡುವ ಹಾಗೆ ವರ್ತಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಮೃದುವಾಗಿ ವರ್ತಿಸಿದರೆ ಕೆಲಸ ಕೆಟ್ಟು ಹೋಗುತ್ತದೆ. ಇನ್ನೊಂದು ಸಂದರ್ಭದಲ್ಲಿ ಮೃದುವಾಗಿ ವರ್ತಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಕಠೋರವಾಗಿ ವರ್ತಿಸುವುದು ಅವಿವೇಕತನವಾಗುತ್ತದೆ. ಪ್ರತಿಯೊಂದು ಸಮಯ ಮತ್ತು ಪ್ರತಿಯೊಂದು ಸಂದರ್ಭ ಒಂದೊಂದು ವರ್ತನೆಯನ್ನು ಆವಶ್ಯಪಡುತ್ತದೆ. ಆದುದರಿಂದ ಸಂದರ್ಭಾನುಸಾರ ವರ್ತಿಸದ ಮನುಷ್ಯನು ಮನುಷ್ಯನಲ್ಲ ಮೃಗವಾಗಿದ್ದಾನೆ..

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ನಿಷ್ಪ್ರಯೋಜಕ ಕ್ಷಮೆಯನ್ನು ಪವಿತ್ರ ಖುರ್‌ಆನ್ ಅನುಮತಿಸಿಲ್ಲ. ಏಕೆಂದರೆ ಅದರಿಂದ ಸ್ವಭಾವ ಗುಣಗಳು ಬಿಗಡಾಯಿಸುತ್ತವೆ. ನಿಝಾಮ್ ವ್ಯವಸ್ಥೆ ಕೆಟ್ಟು ಹೋಗುತ್ತದೆ. ಯಾವುದಾದರೂ ಸುಧಾರಣೆಯನ್ನು ಉಂಟುಮಾಡಬಹುದಾದ ಕ್ಷಮೆಯನ್ನು ಮಾತ್ರ ಅನುಮತಿಸಲಾಗಿದೆ.

ಆದುದರಿಂದ ಪ್ರತಿಯೊಬ್ಬ ಮನುಷ್ಯನು ತನ್ನ ದೈನಂದಿನ ವ್ಯವಹಾರಗಳಲ್ಲಿ ಮತ್ತು ಇತರರೊಂದಿಗೆ ತನ್ನ ಸಂಬಂಧದ ಬಗ್ಗೆ ತನ್ನನ್ನು ಪರಿಶೋಧಿಸುತ್ತಾ ಇದ್ದರೆ, ತಾನು ಅನ್ಯರ ಬಗ್ಗೆ ಹೇಗೆ ಯೋಚಿಸುತ್ತೇನೆ ನಾನು ನನ್ನ ಬಗ್ಗೆ ಹೇಗೆ ಯೋಚಿಸುತ್ತೇನೆ ಎಂದು ಪರಿಶೋಧಿಸುತ್ತಾ ಇದ್ದರೆ, ಸಮಾಜದಲ್ಲಿ ಸುಂದರವಾದ ವಾತಾವರಣ ಉಂಟಾಗುವುದು. ಮುಖ್ಯ ವಿಷಯವೇನೆಂದರೆ ಪ್ರತಿಯೊಂದು ಸಂದರ್ಭದಲ್ಲೂ ಹೀಗೆ ಯೋಚಿಸುತ್ತಾ ಇರಬೇಕು– ನನ್ನ ಪ್ರತಿಯೊಂದು ಕೆಲಸ

ಅಲ್ಲಾಹನ ಸಂಪ್ರೀತಿ ಗಳಿಸುವುದಕ್ಕೋಸ್ಕರವಾಗಿರಬೇಕು ಎಂದು. ಹೀಗೆ ಮಾಡುವುದಾದರೆ ಸುಧಾರಣೆ ಉಂಟಾಗುವುದು.

ಈ ಎರಡು ವಿಷಯಗಳನ್ನು ನಾವು ಯಾವಾಗಲೂ ನೆನಪಿಟ್ಟುಕೊಳ್ಳಬೇಕು. ಏಕೆಂದರೆ ಸುಧಾರಣೆ ಆಗಬೇಕು ಮತ್ತು ಕೆಡುಕುಗಳನ್ನು ನಾವು ತಡೆಯಬೇಕಾಗಿದೆ. ಸಮಾಜದಲ್ಲಿ ಶಾಂತಿ ಮತ್ತು ಸುರಕ್ಷೆಯ ಪರಿಸರವನ್ನು ಸೃಷ್ಟಿಸಬೇಕಾಗಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಅಲ್ಲಾಹನ ಸಂಪ್ರೀತಿಯನ್ನು ಗಳಿಸಬೇಕಾಗಿದೆ. ಏಕೆಂದರೆ ಅವನು ದೌರ್ಜನ್ಯಗಾರರನ್ನು ಇಷ್ಟ ಪಡುವುದಿಲ್ಲ. ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಮನವರಿಕೆ ಮಾಡಲು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ಅಲ್ಲಾಹನು ನಮಗೆ ಭಾಗ್ಯ ದಯಪಾಲಿಸಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, ಮುಕರ್ರಮ್ ಬಿಲಾಲ್ ಮಹ್‌ಮೂದರ ಬಗ್ಗೆ ಪ್ರಸ್ತಾಪಿಸಿದರು. ಅವರನ್ನು ಜನವರಿ ದಿನಾಂಕ ಹನ್ನೊಂದರಂದು ರಬ್ವದಲ್ಲಿ ಶಹೀದ್ ಮಾಡಲಾಗಿತ್ತು. إِنَّا لِلّٰہِ وَإِنَّا إِلَيْهِ رَاجِعُونَ. ಅವರ ಸದ್ಗುಣಗಳನ್ನು ವಿವರಿಸಿದ ನಂತರ ಅವರ ನಮಾಝೇ ಜನಾಝ ಗಾಯಿಬ್ ಅನುಷ್ಠಿಸುವ ಬಗ್ಗೆ ಪ್ರಕಟಿಸಿದರು).

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 22-01-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon